



# ವಿಶ್ವದ ಅತಿದೊಡ್ಡ ಬೀಜ

# ಕೋಕೊ ಡಿ ಮರ್

ಸಸ್ಯ ಪ್ರಪಂಚದಲ್ಲಿ ಇಷ್ಟು ದೊಡ್ಡ ಬೀಜ ಬೇರೊಂದಿಲ್ಲ. ಸಾಮಾನ್ಯವಾಗಿ ಒಂದು ಬೀಜ ಹದಿನೇಳರಿಂದ ಮೂವತ್ತು ಕಿಲೋ ತನಕ ತೂಗುವುದಾದರೆ ಅಪರೂಪವಾಗಿ ದಾಖಲೆ ಮಾಡಿದ ಒಂದು ಬೀಜ ನಲುವತ್ತೆರಡು ಕಿಲೋ ತೂಕವಾಗಿದ್ದೂ ಉಂಟು. ಇದು ತೆಂಗಿನ ಮರದ ಜಾತಿಗೆ ಸೇರಿದ ಕೋಕೊ ಡಿ ಮರ್ ಎಂಬ ಮರದ ಬೀಜ.

ಹೊರಭಾಗದಲ್ಲಿ ತೆಂಗಿನಕಾಯಿಯ ಹಾಗೆ ಕಾಣುತ್ತದೆ. ಸಿಪ್ಪೆಯನ್ನು ಸುಲಿದರೆ ಒಳಗೆ ವಿಚಿತ್ರ ಆಕೃತಿಯಲ್ಲಿ ಎರಡಾಗಿ ಜೋಡಿಕೊಂಡ ಅಗಾಧ ಗಾತ್ರದ ಬೀಜವಿದೆ. ಹೆಚ್ಚಾಗಿ ಎರಡಾಗಿ ಸೇರಿದ ಒಂದೇ ಬೀಜ ಒಳಗಿರುವುದಾದರೂ ಕೆಲವೊಮ್ಮೆ ನಾಲ್ಕು ಬೀಜಗಳು ಜೋಡಿಕೊಂಡ ಆಕೃತಿಯೂ ಇರುವುದುಂಟು.

ಸೆಶಲ್ಸ್ ದ್ವೀಪ ಸಮುದಾಯದ ಪ್ರಸ್ಲಿನ್ ಮತ್ತು ಕ್ಯುರಿಯನ್ ದ್ವೀಪಗಳಲ್ಲಿ ಕೋಕೊ ಡಿ ಮರ್ ಮರಗಳಿವೆ. ಸಸ್ಯ ಶಾಸ್ತ್ರೀಯವಾಗಿ ಲೊಡೊಸ್ಸೈ ಮಾಲ್ಡಿವಿಕಾ ಎಂದು ಹೆಸರಿರುವ ಈ ಮರ ಗರಿಷ್ಠ ಮೂವತ್ತು ಮೀಟರ್ ಎತ್ತರ ಬೆಳೆಯುತ್ತದೆ. ಅದರ ಗರಿಗಳು ಐದು ಮೀಟರ್ ಉದ್ದವಿರುತ್ತವೆ. ಹನ್ನೊಂದನೆಯ ವರ್ಷದಲ್ಲಿ ಮರ ಹೂ ಬಿಡುತ್ತದೆ. ಇದರಲ್ಲಿ ಹೆಣ್ಣು ಮತ್ತು ಗಂಡು ಎಂಬ ಎರಡು ಜಾತಿಗಳಿವೆ. ಗಂಡು ಮರ ಹೂ ಮಾತ್ರ ಬಿಡುತ್ತದೆ. ಹೆಣ್ಣು ಮರದಲ್ಲಿ ಕಾಯಿಗಳಾಗುತ್ತವೆ. ಮಳೆ, ಚಂಡಮಾರುತ, ಸಿಡಿಲು ಮಿಂಚುಗಳ ಮೂಲಕ ಗಂಡು ಹೂವಿನ ಪರಾಗ ಕಣಗಳು ಹೆಣ್ಣು ಹೂವಿನಲ್ಲಿ ಸೇರಿ ಕಾಯಿಗಳಾಗುವಂತೆ ನಿಸರ್ಗ ನಿಯಮವನ್ನು ರೂಪಿಸಿದೆ. ಹೂ ಬಿಟ್ಟು ಮೂರು ವರ್ಷಗಳ ತನಕ ಕಾಯಿ ಬೆಳೆಯಲು ಕಾಯಬೇಕು.

■ ಪ. ರಾಮಕೃಷ್ಣ ಶಾಸ್ತ್ರಿ



